**SINDHI HIGH SCHOOL, HEBBAL**
**PERIODIC TEST-2[2024-25]**
**SUBJECT: L2 KANNADA**

Class: IV
Date: 12.12.2024
No of Sides: 02

Max Marks: 30
Reading Time: 8:15 to 8:25 am
Writing Time: 8:25 to 09:25 am

**GENERAL INSTRUCTIONS:**

- Write your Name, Roll number, Section in the answer script.
- Read all the Questions carefully.
- Answer all the Questions and write neatly.

| Q.no | | Marks |
|---|---|---|
| I | **1.ಈ ಗದ್ಯಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:-** | 5 X 1=5 |

ಒಂದು ಕಾಡಿನಲ್ಲಿ ಒಂದು ಬೆಟ್ಟವಿತ್ತು. ಅದಕ್ಕೆ ತುಂಬ ಜಂಭವಿತ್ತು. ಎಲ್ಲರಿಗಿಂತ ನಾನೇ ಬಲಶಾಲಿ ಎಂಬ ಅಹಂಕಾರವಿತ್ತು. ಇತರೆ ಬೆಟ್ಟ ಗುಡ್ಡಗಳು ಅದರ ಮಾತನ್ನು ನಿಜವೆಂದು ನಂಬಿದ್ದವು. ಒಂದು ದಿನ ಜಂಭದ ಬೆಟ್ಟ ಪಕ್ಕದ ಕಾಡಿಗೆ ಸುತ್ತಾಡಿಕೊಂಡು ಬರಲು ಹೊರಟಿತು. ದಾರಿಯಲ್ಲಿ ಅದಕ್ಕೆ ದೊಡ್ಡ ಬೆಟ್ಟ ಎದುರಾಯಿತು. ಅದು ಜಂಭದ ಬೆಟ್ಟಕ್ಕಿಂತಲೂ ದೊಡ್ಡದಾಗಿತ್ತು. ಆದರೆ ಅದನ್ನು ನೋಡಿ ಜಂಭದ ಬೆಟ್ಟಕ್ಕೆ ಕೋಪ ಬಂತು. ನನ್ನ ದಾರಿಗೆ ಅಡ್ಡವಾಗಿ ನಿಲ್ಲಬೇಡ,ದೂರ ಸರಿ ಎಂದಿತು.

ದೊಡ್ಡ ಬೆಟ್ಟ ಅಲ್ಲಿಯೇ ನಿಂತು ಕೊಂಡಿತು. ಅದು ಜಂಭದ ಬೆಟ್ಟವನ್ನು ಕೋಪದಿಂದ ನೋಡಿತು. ನನ್ನ ತಂಟೆಗೆ ಬರಬೇಡ, ಬಂದರೆ ನಿನ್ನನ್ನು ಪುಡಿಪುಡಿ ಮಾಡುತ್ತೇನೆ ಎಂದಿತು. ಜಂಭದ ಬೆಟ್ಟ ಜೋರಾಗಿ ಬಂದು ದೊಡ್ಡ ಬೆಟ್ಟಕ್ಕೆ ಬಲವಾಗಿ ಹೊಡೆಯಿತು. ಆಗ ದೊಡ್ಡ ಬೆಟ್ಟ ಜೋರಾಗಿ ಜಂಭದ ಬೆಟ್ಟಕ್ಕೆ ಹೊಡೆದಾಗ ನೋವು ತಾಳಲಾರದೆ ಜೋರಾಗಿ ಅಳಲು ಪ್ರಾರಂಭಿಸಿತು.ಆಗ ದೊಡ್ಡ ಬೆಟ್ಟ ಅದಕ್ಕೆ ಬುದ್ಧಿಯನ್ನು ಹೇಳಿತು. ಅಂದಿನಿಂದ ಜಂಭದ ಬೆಟ್ಟ ಎಲ್ಲರೊಂದಿಗೆ ಸ್ನೇಹದಿಂದ ಬಾಳಿತು.

**ಪ್ರಶ್ನೆಗಳು :-**

1. ಜಂಭದ ಬೆಟ್ಟ ಹೊರಟ್ಟಿದ್ದು ಇಲ್ಲಿಗೆ ___________
   A) ಪಕ್ಕದ ಕಾಡಿಗೆ B) ಪಕ್ಕದ ನಾಡಿಗೆ
   C) ಪಕ್ಕದ ಊರಿಗೆ D)ಪಕ್ಕದ ಕೇರಿಗೆ

2.ಜಂಭದ ಬೆಟ್ಟಕ್ಕೆ ದೊಡ್ಡ ಬೆಟ್ಟ_________
   A) ದೂರವಾಯಿತು B) ಎದುರಾಯಿತು
   C) ಚಿಕ್ಕದಾಯಿತು D)ಹಳೆಯದಾಯಿತು

3.ಬುದ್ಧಿಯನ್ನು ಕಲಿತ ಜಂಭದ ಬೆಟ್ಟ ಬಾಳಿದ್ದು ಹೀಗೆ________
   A) ಜಂಭದಿಂದ B) ಕೋಪದಿಂದ
   C) ಸ್ನೇಹದಿಂದ D) ಆಸೆಯಿಂದ

4.ದೊಡ್ಡ ಬೆಟ್ಟ , ಜಂಭದ ಬೆಟ್ಟಕ್ಕೆ ನನ್ನ ತಂಟೆಗೆ ಬಂದರೆ _________ ಮಾಡುತ್ತೇನೆ ಎಂದಿತು.
   A) ಪುಡಿಪುಡಿ B) ಪಿರಿಪಿರಿ C) ದೂರದೂರ D) ಕಿರಿಕಿರಿ

5. ಜಂಭದ ಬೆಟ್ಟಕ್ಕೆ , ದೊಡ್ಡ ಬೆಟ್ಟವು ಹೊಡೆದಾಗ ನೋವು ತಾಳಲಾರದೆ ಜೋರಾಗಿ _______ ಪ್ರಾರಂಭಿಸಿತು.
   A) ನಗಲು B) ಅಳಲು C)ಹಾಡಲು D)ಓಡಲು

| | | |
|---|---|---|
| II | **ಸುಳಿವು ಪದಗಳ ಮೂಲಕ ಕಥೆಯನ್ನು ಪೂರ್ಣಗೊಳಿಸಿ:-**<br>**( ರುಚಿಯಾದ, ಕುತೂಹಲ,ಇಬ್ಬರೂ ,ಕೈಲಾಸ , ಬ್ರಹ್ಮಾಂಡವನ್ನು,**<br>**ತಂದೆ- ತಾಯಿ , ಪಂದ್ಯವನ್ನು,ನವಿಲಿನ )**<br>ಒಂದು ದಿನ ______ದಲ್ಲಿ ಶಿವ - ಪಾರ್ವತಿ ಕುಳಿತಿದ್ದರು. ಅವರ ಪಕ್ಕದಲ್ಲಿ ಷಣ್ಮುಖ ಮತ್ತು ಗಣಪತಿ ಕುಳಿತಿದ್ದರು. ಆಗ ಅಲ್ಲಿಗೆ ನಾರದರು ಬಂದರು. ಅವರ ಕೈಯಲ್ಲಿ ಒಂದು ______ಮಾವಿನ ಹಣ್ಣು ಇತ್ತು. ಅದನ್ನು ನೋಡಿ ಅವರಿಬ್ಬರಿಗೂ ಆಸೆಯಾಯಿತು. ಆಗ ಅವರು ______ದಿಂದ ಅದೇನು ಎಂದು ಕೇಳಿದರು. ನಾರದರು ಇದು ಸವಿಯಾದ ಮಾವಿನ ಹಣ್ಣು ಎಂದರು. ಆಗ ______ಅದನ್ನು ನನಗೆ ಕೊಡಿ, ನನಗೆ ಕೊಡಿ ಎಂದರು. ಆಗ ನಾರದರು ಒಂದು ________ ಮಾಡೋಣ ಎಂದರು. ನಾರದರು ಬಾಲಕರೇ______ ಮೊದಲು ಸುತ್ತಿ ಬಂದವರಿಗೆ ಕೊಡುತ್ತೇನೆ ಎಂದರು. ಕೂಡಲೆ ಷಣ್ಮುಖನು _______ ಮೇಲೆ ಕುಳಿತು ಹೊರಟನು. ಗಣಪತಿಯು ತನ್ನ ______ಯವರನ್ನು ಸುತ್ತಿದನು. ಹಣ್ಣನ್ನು ಪಡೆದನು. | 8 x ½ =4 |
| III | **ಸೂಚನೆಯಂತೆ ಬರೆಯಿರಿ:-**<br>1.'**ಕುತೂಹಲ**' ಈ ಪದದ ಸಮಾನಾರ್ಥಕ ಪದ________<br>A) ಹಾಲಾಹಲ B) ಅಚ್ಚರಿ C) ಖ್ಯಾತ D) ಪ್ರಕಾರ<br>2.'**ಹುಡುಗ**' ಈ ಪದದ ಅನ್ಯಲಿಂಗ ರೂಪ ________<br>A) ಹುಡುಗಿ B) ಹುಡುಗನು C) ಹುಡುಗರು D)ಹುಡುಗನ<br>3.'**ಪಕ್ಷಿಗಳು**' ಈ ಪದದ ಏಕವಚನ ರೂಪ________<br>A) ಪಕ್ಷಿಗಳಿಗೆ B) ಪಕ್ಷಿಗಳ C) ಪಕ್ಷಿ D)ಪಕ್ಷಿಗಳನ್ನು<br>4. ' **ಶ್ರೀಮಂತ**' ಈ ಪದದ ವಿರುದ್ಧ ಪದ ________<br>A) ಬಡವ B) ಸಿರಿವಂತ C) ಸಿರಿತನ D) ಶ್ರೀಮಂತರು<br>5.' **ನಡೆದಿತ್ತು**' ಪದ್ಯದಲ್ಲಿರುವಂತೆ ಈ ಪದದ ಪ್ರಾಸಪದ________<br>A) ತುಂಬಿತ್ತು B) ಅಂತಿತ್ತು C) ಹಾಕ್ಕಿತ್ತು D) ಹೇಳ್ಳಿತ್ತು<br>6.' **ಪಾಲಾಯಿತು**' ಈ ಪದವನ್ನು ಬಿಡಿಸಿದಾಗ________<br>A) ಪಾಲು+ಯಿತು B) ಪಾಲಾ+ಯಿತು<br>C) ಪಾಲು+ ಆಯಿತು D) ಪಾಲೇ + ಯಿತು<br>7.'**ಊದುತ್ತ +ಇತ್ತು**' ಈ ಪದವನ್ನು ಕೂಡಿಸಿದಾಗ________<br>A) ಊದುತ್ತಿತ್ತು B) ಊದಿತ್ತು C) ಊದೀತ್ತು D) ಊದುತ್ತಾಯಿತು | 7X 1=7 |
| IV | **ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:-**<br>1.ಬಾಳೆಕಾಯಿ ಏನು ಮಾಡುತ್ತಿತ್ತು?<br>2.ತೆಹ್ಮಿನಾ ಯಾರು?<br>3.ಭಾರತದಲ್ಲಿ ಪಕ್ಷಿ ಅಧ್ಯಯನಕ್ಕೆ ನಾಂದಿ ಹಾಡಿದವರು ಯಾರು?<br>4.ಹೀರೇಕಾಯಿ ಯಾವುದನ್ನು ನೋಡಿ ನಕ್ಕು ನಲಿಯುತ್ತಿತ್ತು?<br>5.ಕಾಡುಗುಬ್ಬಚ್ಚಿಯ ಕುತ್ತಿಗೆಯ ಕೆಳಗೆ ಯಾವ ಬಣ್ಣವಿತ್ತು? | 5X1=5 |
| V | **ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ:-**<br>1.ಸಲೀಂ ಅಲಿ ಯಾವಾಗ ಮತ್ತು ಎಲ್ಲಿ ಜನಿಸಿದರು? ಅವರು ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಯಾವುದರ ಬಗ್ಗೆ ತರಬೇತಿ ಪಡೆದರು?<br>2. ' ಹಣ್ಣು ಕಾಯಿ ಮದುವೆ ' ಈ ಪದ್ಯ ಬರೆದವರು ಯಾರು ಮತ್ತು ಯಾವ ಹಣ್ಣು ಮತ್ತು ಯಾವ ಕಾಯಿಗೆ ಮದುವೆ ನಡೆದಿತ್ತು?<br>3.ಯಾವ ಪರಂಪರೆಯನ್ನು ಬೆಳೆಸುವುದು ನಮ್ಮ ಕರ್ತವ್ಯ? | 3 X 2 =6 |
| VI | **ಈ ಕೆಳಗಿನ ಪ್ರಶ್ನೆಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:-**<br>1.ಸಲೀಂ ಅಲಿಯವರಿಗೆ ಪಕ್ಷಿತಜ್ಞನಾಗಬೇಕೆಂದು ಅನಿಸಿದ್ದೇಕೆ? | 3 X 1 =3 |